ನನ್ನದೇ ರೀತಿಯಲ್ಲಿ ಸ್ವೀಕರಿಸುತ್ತಿದ್ದೆ. ಬಹುಶಃ ಅದರಿಂದಲೇ ಸಮಾಜದ ಹಲವು ಸಮಸ್ಯೆಗಳನ್ನು ಇಟ್ಟುಕೊಂಡು ಕಥೆ ಬರೆಯಲಿಕ್ಕೆ ಸಾಧ್ಯವಾಯ್ತು. ನಂತರ ನನ್ನನ್ನು ಹೆಚ್ಚು ಆತಂಕಕ್ಕೆ ಈಡುಮಾಡಿದ್ದು ಕೋಮುವಾದ. ಕೋಮುವಾದದ ಪರಿಚಯ ಆಗಿದ್ದು ನಾನು ಮಂಗಳೂರಿಗೆ ಬಂದ ನಂತರ. ಮಂಗಳೂರಿಗೆ ನಂಗೆ ಪೋಸ್ಟಿಂಗ್ ಆಗಿತ್ತು. ಅಲ್ಲಿ ಕೆಲವು ಎಡಪಂಥೀಯ ಗೆಳೆಯರೆಲ್ಲ ಸಿಕ್ಕಿದ್ರು. ಎಡಪಂಥೀಯ ಅನುಭವಗಳು ಬಂದವು. ನನ್ನಲ್ಲಿ ಪ್ರಕೃತಿ ಸಹಜವಾಗಿಯೇ ಎಡಪಂಥದ ಕೆಲವು ಅಂಶಗಳು ಬಂದಿದ್ದರಿಂದ ಆ ವಾದ ನನ್ನನ್ನು ಹೆಚ್ಚು ಸೆಳೆಯಿತು. ನರೇಂದ್ರನಾಯಕ್ ಅವರ ನೇತೃತ್ವದಲ್ಲಿ ವಿಚಾರವಾದಿಗಳ ಸಂಘ ಮಾಡಿದೆವು. ಆಗಲೇ ಈ ಕೋಮುವಾದದ ವಿಷಯ ಬಹಳ ಮುಖ್ಯ ಅನಿಸಲಿಕ್ಕೆ ಶುರುವಾಯ್ತು. ಅದರ ನಂತರ ಬಂದ ಕೆಲವು ಕಥೆಗಳು ಹೆಚ್ಚು ಕೋಮುವಾದದ ವಸ್ತು ಒಳಗೊಂಡಿವೆ.

- **ನೀವು ಕನ್ನಡದಲ್ಲಿ ಹೇಳಲಿಕ್ಕೆ ಹೊರಟಿದ್ದ ಸಂಸ್ಕೃತಿ ಕನ್ನಡಕ್ಕೆ ಗೊತ್ತೇ ಇರಲಿಲ್ಲ. ಉದಾಹರಣೆಗೆ 'ದಜ್ಜಾಲ' ಎಂಬುದು ನಿಮ್ಮೊಂದು ಕಥೆಯ ಹೆಸರು. ಆ ಶಬ್ದ ಒಬ್ಬ ಮುಸಲ್ಮಾನನಿಗೆ ಅವನ ಸಂಸ್ಕೃತಿಯ ಭಾಗವಾಗಿ ಗೊತ್ತಿರುತ್ತದೆ. ದಜ್ಜಾಲ ಯಾರು, ಯಾವಾಗ ಬರ್ತಾನೆ ಎನ್ನುವದಕ್ಕೆಲ್ಲ ದೊಡ್ಡ ಕಥೆಯೇ ಇದೆ. ಈ ರೀತಿಯ ಶಬ್ದಗಳನ್ನು, ಇಮೇಜರಿಗಳನ್ನು ಕನ್ನಡದಲ್ಲಿ ಬಳಕೆ ಮಾಡುವುದು ಕಷ್ಟ ಅಂತ ನಿಮಗೆ ಅನಿಸಲಿಲ್ಲವೇ?**

ಇಲ್ಲ. ನನಗೆ ಅದು ಪ್ರಯಾಸ ಅನಿಸಲೇ ಇಲ್ಲ. ಕಷ್ಟ–ಸುಲಭ ಅನ್ನೋ ನಿಟ್ಟಿನಲ್ಲಿ ಹೋಗ್ಲೇ ಇಲ್ಲ ನಾನು. ಅದೇನೋ ತನ್ನಷ್ಟಕ್ಕೆ ಬಂತು. 'ದಜ್ಜಾಲ' ಅನ್ನುವ ಕತೆಯಲ್ಲಿ ನಡೆಯುವ ಘಟನೆ ದಕ್ಷಿಣ ಕನ್ನಡದಲ್ಲಿ ನಡೆಯಿತು. ಕೋಮುಘರ್ಷಣೆ ಆದಾಗ ನಾನು, ಜಿ. ರಾಜಶೇಖರ, ಫಣಿರಾಜ್ ಎಲ್ಲ ಸೇರಿಕೊಂಡು ಆ ಸ್ಥಳಕ್ಕೆ ಹೋಗುತ್ತಿದ್ದೆವು. ಅಲ್ಲಿನ ಜನರನ್ನು ಮಾತಾಡಿಸುತ್ತಿದ್ದೆವು. ಅಲ್ಲಿ ಕಂಡ ಘಟನೆಗಳನ್ನೆಲ್ಲ ಒಟ್ಟು ಮಾಡಿ ಬರೆದ ಕಥೆ ಅದು. ಅಲ್ಲಿ ಒಂದು ಹೆಂಗಸು ತನ್ನ ಗುಡಿಸಲ ಮೇಲೆ ಬೆಂಕಿ ಉಂಡೆ ಬೀಳುತ್ತಿತ್ತು ಎಂದು ಹೇಳಿದ್ದರು. ಆಗ ನನಗೆ ಬಾಲ್ಯದಲ್ಲಿ ಕೇಳಿದ್ದ ದಜ್ಜಾಲನ ಕಥೆಯೇ ನೆನಪಾಯ್ತು. ದಜ್ಜಾಲ ಮಹಾಕಾಯ. ಆಕಾಶದೆತ್ತರಕ್ಕೆ ಇರ್ತಾನೆ. ಅವನು ಮಾತಾಡುವಾಗ ಬಾಯಿಯಲ್ಲಿ ಬೆಂಕಿಯ ಉಂಡೆಗಳು ಬರ್ತಾವೆ ಎಂಬುದು ಕಥೆ. ಅದನ್ನೇ ರೂಪಕ ಮಾಡಿಕೊಂಡೆ. ಆ ರೂಪಕ ಮಾಡುವಾಗ ನನಗೇನೂ ಕಷ್ಟ ಅನಿಸಲಿಲ್ಲ. ಯಾಕೆಂದರೆ ಹೊಸತೇನೋ ಹೇಳುತ್ತಿದ್ದೇನೆ ಎನ್ನುವ ಪರಿವೆಯೂ ನನಗಿರಲಿಲ್ಲ. ನಾನು ಕೇಳುತ್ತಿದ್ದ ಕಥೆಗಳಲ್ಲಿ ಬರುವ ಪೌರಾಣಿಕ ಅನುಭವಗಳು ಮತ್ತು ಬದುಕಿನಲ್ಲಿ ಕಂಡ ನಿಜಾನುಭವಗಳು ಸೇರಿಸಿಕೊಂಡು ಬರೆಯುತ್ತ ಹೋದೆ. 'ನೋಂಬು', 'ದಜ್ಜಾಲ', 'ಬುರ್ಖಾ' ಎಲ್ಲ ಕಥೆಗಳು ಹುಟ್ಟಿದ್ದೇ ಹಾಗೆ.

- **ಎರಡೇ ಕಾದಂಬರಿಗೆ ನಿಮ್ಮ ಕಾದಂಬರಿ ಪ್ರಯೋಗ ನಿಲ್ಲಿಸಿಬಿಟ್ಟರಲ್ಲಾ? ಹೆಚ್ಚು ಕಥೆಗಳನ್ನೇ ಬರೆದಿರಿ... ಯಾಕೆ?**

ಇನ್ನೂ ಹಲವು ಕಾದಂಬರಿಯ ವಸ್ತುಗಳು ನನ್ನಲ್ಲಿ ಹಾಗೆಯೇ ಇವೆ. ಎರಡು ಮೂರು ಕಾದಂಬರಿ ವಸ್ತುಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡಿದ್ದೇನೆ. ಇನ್ನು ಹೆಚ್ಚು ಬರೀಲಿಕ್ಕೆ ಆಗ್ತದೋ ಇಲ್ವೋ ಗೊತ್ತಿಲ್ಲ; ಆದರೂ ಬರೆಯುವ ವಿಚಾರ ಇದೆ ನನ್ನಲ್ಲಿ.

ನಾನು ಕೆಲಸ ಮಾಡುತ್ತಿದ್ದ ಬ್ಯಾಂಕಿನಲ್ಲಿ ನನ್ನ ಪ್ರಮೋಷನ್ ಆಗಿ ಕ್ಯಾಲಿಕಟ್‌ಗೆ ಫಾರಿನ್ ಎಕ್ಸ್‌ಚೇಂಜ್ ಎಕ್ಸ್ಚೇಂಜ್ ತರಬೇತಿಗಾಗಿ ವರ್ಗ ಆಯ್ತು. ನನಗೆ ಸ್ವಲ್ಪ ಹೊರಗಡೆ ಸುತ್ತಾಡುವ ಹುಚ್ಚೂ ಇತ್ತು. ಸಮುದ್ರದ ಬದಿಗೆಲ್ಲ ಹೋಗಿ ಸುತ್ತಾಡ್ತಿದ್ದೆ. ನನ್ನ ಭಾವ ಮೀನು ವ್ಯಾಪಾರದವರು. 'ಕ್ಯಾಲಿಕಟ್‌ನಲ್ಲಿ ಒಂದು ಊರಿದೆ. ಅಲ್ಲಿ ಬರೀ ಅರಬ್ಬಿಗಳನ್ನು ಮದುವೆಯಾಗುವ ಹೆಂಗಸರಿದ್ದಾರೆ'